

# ಶಿಕ್ಷಣದಲ್ಲಿ ಮೌಲ್ಯಗಳು

❑ ಡಾ. ವಸಂತ ಕುಮಾರ್

**ವಿಶ್ವವಿದ್ಯಾನಿಲಯ ಮಟ್ಟದ ಶಿಕ್ಷಣದಲ್ಲಿ (ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು) ದೀರ್ಘಕಾಲ ಕೆಲಸ ಮಾಡುತ್ತಿರುವ ಲೇಖಕರು ಶಿಕ್ಷಣದ ಬಗೆಗಿನ ತಮ್ಮ ಚಿಂತನೆಗಳನ್ನು ಈ ಲೇಖನದಲ್ಲಿ ಸಮಾಪ್ತಿಗೊಳಿಸಿದ್ದಾರೆ.**

## ಶಿಕ್ಷಕರು

ಇಂದಿನ ವಿದ್ಯಾರ್ಥಿಗಳು ನಾಳಿನ ಶಿಕ್ಷಕರು. ಶಿಕ್ಷಕರು ವಿದ್ಯಾರ್ಥಿಗಳಿಗೆ ಜ್ಞಾನಪ್ರಸಾರವಾಗಲು ಮಧ್ಯವರ್ತಿಗಳಾಗಿರುವರು. ಶಿಕ್ಷಕರಾಗಬಯಸುವವರು ನಿರಂತರ ವಿದ್ಯಾರ್ಥಿಗಳಾಗಬೇಕಾಗುವುದು. ಅವರ ಜ್ಞಾನಾರ್ಜನೆ ಅನವರತ ನಡೆಯಬೇಕಾಗುವುದು. ಕಲಿಯುವುದು ಮತ್ತು ಕಲಿಸುವುದು ಜತೆಜತೆಯಾಗಿ ಹೋಗಬೇಕು. ಯಾರಿಗಾದರೂ ಸ್ವಲ್ಪ ತಿಳಿವಳಿಕೆಯನ್ನು ನೀಡಬೇಕಾದರೂ, ಸಂಬಂಧಪಟ್ಟ ಜ್ಞಾನ ನಮ್ಮಲ್ಲಿ ಅಪಾರವಾಗಿರಬೇಕು. ಇಲ್ಲವಾದರೆ, ಕಲಿಯುವವರಿಗೂ ಮತ್ತು ಕಲಿಸುವವರಿಗೂ ನೀರುಹಾವು ಕಪ್ಪೆಯನ್ನು ನುಂಗಿದಂತೆ ಹಿಂಸೆಯಾಗುವುದು. ಶಿಕ್ಷಕರು ವಿಷಯಗಳನ್ನು ತಿಳಿದಿದ್ದರೆ ಸಾಲದು, ಅವನ್ನು ಹೇಗೆ ಕಲಿಸಬೇಕೆಂಬುದನ್ನೂ ತಿಳಿದಿರಬೇಕು. ತತ್ತ್ವಪ್ರತಿಪಾದನೆಯ ಕಲೆ ಶ್ರೀರಾಮಕೃಷ್ಣರಲ್ಲಿ ಪರಾಕಾಷ್ಠೆಯನ್ನು ಮುಟ್ಟಿರುವುದು. ಗಹನವಾದ ತತ್ತ್ವಗಳನ್ನು ಸರಳವಾದ ಭಾಷೆಯಲ್ಲಿ ವಿವರಿಸುವರು. ವಿಷಯಗಳನ್ನು ಕ್ರಮವಾಗಿ ಹೇಳುವರು. ನಿದರ್ಶನ, ಕಥೆ, ಹಾಸ್ಯ ಅವುಗಳಲ್ಲಿ ಹಾಸು ಹೊಕ್ಕಾಗಿದ್ದು ರಂಜನೀಯವಾಗಿ ಅವು ಪಾಮರರಿಗೂ ಅರ್ಥವಾಗುವುವು. ಸಾಧಾರಣ ವಿಷಯಗಳನ್ನು ಹೇಳಲು ಹೋಗಿ, ಅವನ್ನು ವಿವರಿಸಲಾಗುವುದಿಲ್ಲ ಅನುಭವಿಸಿಯೇ ತಿಳಿಯಬೇಕು ಎಂದು ನಾವು ಆಗಾಗ ಹೇಳುವೆವು. ಆದರೆ, ಶ್ರೀರಾಮಕೃಷ್ಣರು ವಿವರಣೆಗೆ ಅತೀತವಾದ ನಿರ್ವಿಕಲ್ಪ ಸಮಾಧಿಯಂತಹ ವಿಷಯವನ್ನೂ ಎಲ್ಲಿಯವರೆಗೆ ವಿವರಿಸಬಹುದೊ ಅಲ್ಲಿಯವರೆಗೆ ವಿವರಿಸಲೆತ್ನಿಸುವರು. ಮನೋಜ್ಞವಾದ ಅವರ ವಿವರಣೆಯಿಂದ ಕೇಳುಗರು, ಓದುಗರು ಧನ್ಯರಾಗುವರು. ಆದುದರಿಂದಲೇ ಅವರನ್ನು ಆಚಾರ್ಯರಲ್ಲಿ ಮಹಾಚಾರ್ಯರು ಎಂದು ಅವರ ಶಿಷ್ಯರು ಸ್ತುತಿಸಿರುವುದು. ಉನ್ನತ ಶಿಕ್ಷಣವೆಂದರೆ ಗಹನವಾದ ತತ್ತ್ವಗಳ ಪ್ರತಿಪಾದನೆ ಮತ್ತು ಉಪಾಸನೆ.

ಶಿಕ್ಷಣದ ಗುಣಮಟ್ಟವನ್ನು ನಿರ್ಧರಿಸುವವರು, ಪಾಲಿಸುವವರು ಮತ್ತು ರಕ್ಷಿಸುವವರು ಶಿಕ್ಷಕರೇ. ಯಾವುದೇ ಶಿಕ್ಷಣ ಸಂಸ್ಥೆಯ ಕೀರ್ತಿ ನಿಂತಿರುವುದು ಅಲ್ಲಿನ ಶಿಕ್ಷಕರ ಮೇಲೆ. ಯಾವ ಸಂಸ್ಥೆಯಲ್ಲಿ ಶಿಕ್ಷಣದ ಮಟ್ಟ ಹಾಳಾಗಿರುವುದೊ ಅದನ್ನು ಎಂತಹ ಸಮರ್ಥ ಆಡಳಿತವೂ ರಕ್ಷಿಸಲಾರದು.

## ಶಿಕ್ಷಕರ ವ್ಯಕ್ತಿತ್ವ

ವಿದ್ಯಾಭ್ಯಾಸದಲ್ಲಿ ಪ್ರಜಾಪ್ರಭುತ್ವವಿಲ್ಲ, ಅಧಿಕಾರವಾದ ಇರುವುದು ಎನ್ನುವುದೇನೋ ನಿಜ. ಆದರೆ, ಇದರ ಅರ್ಥ, ಶಿಕ್ಷಕರು ತಮಗೆ ಇಚ್ಛೆ ಬಂದಂತೆ ಮಾಡಬಹುದು ಎಂದಲ್ಲ. ವಿಷಯ ಯಾವುದೇ ಆದರೂ ಅದು ಶಿಕ್ಷಕರ ವ್ಯಕ್ತಿತ್ವದ ಮೂಲಕ ಬರುವುದು. ಪುಸ್ತಕದಲ್ಲಿ ಇರುವುದನ್ನು ಗಿಳಿಯಂತೆ ಪಾಠ ಒಪ್ಪಿಸುವುದು ಬೋಧನೆಯಲ್ಲ. ನನ್ನ ಜ್ಞಾನವೆಲ್ಲಾ ಪುಸ್ತಕಗಳಲ್ಲಿರುವುದು ಎಂದು ಹೇಳುವಂತಿಲ್ಲ. ಈ ಮಾತನ್ನು ವಿದ್ಯಾರ್ಥಿಗಳೂ ಹೇಳಿ, ನೂರಕ್ಕೆ ನೂರು ಅಂಕಗಳನ್ನು ಕೇಳಬಹುದು. "ಜ್ಞಾನವೆನ್ನುವುದು ಕೇವಲ ಗ್ರಂಥಗಳಲ್ಲಿರುವುದಾದರೆ, ಗ್ರಂಥಾಲಯಗಳು ಮತ್ತು ವಿಶ್ವಕೋಶಗಳೇ ಮಹರ್ಷಿಗಳಾಗುತ್ತಿದ್ದುವು; ಜ್ಞಾನಭಂಡಾರ ವ್ಯಕ್ತಿಗಳಲ್ಲಿರುವುದು ಎಂದು ಸ್ವಾಮಿ ವಿವೇಕಾನಂದರು ಹೇಳುವರು" (ಸ್ವಾ.ವಿ. ಕೃತಿಶ್ರೇಣಿ : ಸಂ. ೩, ಪು. ೧೭೮; ಸಂ. ೮, ಪು. ೨೭೯). ಜ್ಞಾನ ವ್ಯಕ್ತಿಗಳಿಂದ ಪುಸ್ತಕಕ್ಕೆ ಬರುವುದು, ಅಲ್ಲಿಂದ ವ್ಯಕ್ತಿಗಳಿಗೆ ಹೋಗಬೇಕು. ನಮ್ಮ ತಿಳಿವಳಿಕೆಯಲ್ಲಿ ಅಲ್ಲಲ್ಲಿ ಅಸಮರ್ಪಕತೆ ಇರುವುದು. ಅದನ್ನು ಅಧ್ಯಯನದಿಂದ, ಸಾಧನೆಯಿಂದ ಪೂರ್ಣಗೊಳಿಸಬೇಕು. ಗುರುವಿನ ಒಂದು ಲಕ್ಷಣವೆಂದರೆ, ಆತ ಶಾಸ್ತ್ರಸಾರವನ್ನು ತಿಳಿದಿರಬೇಕು. (ಸ್ವಾ. ವಿ. ಕೃತಿಶ್ರೇಣಿ, ಸಂ.೧. ಪು.೧೪೮). ಗ್ರಂಥದಲ್ಲಿರುವ ವಿಷಯ ಅಧ್ಯಾಪಕನ ಅನುಭವವಾಗಿ ಅವನ ವ್ಯಕ್ತಿತ್ವದ ಮೂಲಕವಾಗಿ ಪಾಠಗಳಂತೆ ಹೊರಬರಬೇಕು. ಇದು ಎಷ್ಟು ಸಮರ್ಪಕವಾಗಿ ಆಗುವುದೋ ಅಷ್ಟು ಶಿಕ್ಷಣ ವಿದ್ಯಾರ್ಥಿ

ಗಳ ಮೇಲೆ ಪರಿಣಾಮಕಾರಿಯಾಗುವುದು.

ನಾವು ಹೇಳಿದಂತೆ ಮಾಡಿ, ಆದರೆ ನಾವು ಮಾಡಿದಂತೆ ಮಾಡಬೇಡಿ ಎಂದು ಶಿಕ್ಷಕರು ಹೇಳಲಾಗುವುದಿಲ್ಲ. "ಆಚಾರ ಹೇಳುವುದಕ್ಕೆ, ಬದನೆಕಾಯಿ ತಿನ್ನುವುದಕ್ಕೆ" ಎಂದಾದರೆ ಜ್ಞಾನ ಪ್ರಸಾರವಾಗುವುದಿಲ್ಲ. ವಿದ್ಯಾರ್ಥಿಗಳು ಶಿಕ್ಷಕರಿಗಿಂತ ಕಡಿಮೆ ವಯಸ್ಸಿನವರಾಗಿರುವರು ಮತ್ತು ಸದಾ ಅಧ್ಯಾಪಕರ ನಡೆನುಡಿ ವ್ಯವಹಾರಗಳನ್ನು ಗಮನಿಸುತ್ತಿರುವರು ಎಂಬುದನ್ನು ಮರೆಯಬಾರದು. ತರಗತಿಗಳಲ್ಲಿ ಉಪಾಧ್ಯಾಯರು ಹೇಳುವ ಪಾಠಕ್ಕಿಂತ ಹೆಚ್ಚಾಗಿ ಅವರ ಹವ್ಯಾಸ, ಶಾಲೆಯ ಸಮಯ ಮುಗಿದ ನಂತರ ಅವರ ಕಾರ್ಯಕ್ರಮ ಇವುಗಳ ಮೇಲೆ ವಿದ್ಯಾರ್ಥಿಗಳ ಗಮನ ಹೆಚ್ಚಾಗಿರುವುದು. ಪಾಠಕ್ಕಿಂತ ಹೆಚ್ಚಾಗಿ ಉಪಾಧ್ಯಾಯರ ವ್ಯಕ್ತಿತ್ವ ವಿದ್ಯಾರ್ಥಿಗಳ ಮಧ್ಯೆ ಚರ್ಚಿತವಾಗುತ್ತಿರುವುದು. ಉಪಾಧ್ಯಾಯರ ಓರೆಕೋರೆಗಳು, ಹಾವಭಾವಗಳು, ಸ್ವಭಾವ ಮತ್ತು ಹಿನ್ನೆಲೆಯ ಒಂದು ವಿಶ್ವಕೋಶವೇ ವಿದ್ಯಾರ್ಥಿಗಳಲ್ಲಿ ಇರುವುದು. ಮತ್ತು ಅದು ಅನಧಿಕೃತವಾಗಿ ಪೀಳಿಗೆಯಿಂದ ಪೀಳಿಗೆಗೆ ರವಾನೆಯಾಗುತಿರುವುದು. ಉಪಾಧ್ಯಾಯರು ನಿವೃತ್ತರಾಗಿದ್ದರೂ, ಕಾಲವಾಗಿದ್ದರೂ ಅವರ ಹೆಸರು ಅದರಲ್ಲಿ ಇದ್ದೇ ಇರುವುದು. ಶಿಕ್ಷಕರ ಪಾಠವನ್ನು ಅವರ ವ್ಯಕ್ತಿತ್ವದಿಂದ ಬೇರ್ಪಡಿಸಲಾಗುವುದಿಲ್ಲ. ವಿದ್ಯಾರ್ಥಿಗಳ ಮೇಲೆ ಬಹುಮಟ್ಟಿಗೆ ಪರಿಣಾಮಕಾರಿಯಾಗುವುದು ಶಿಕ್ಷಕರ ವ್ಯಕ್ತಿತ್ವ. ತರಗತಿಯಲ್ಲಿ ಹೇಳಿಕೊಡುವ ಪಾಠಗಳು ವಿದ್ಯಾರ್ಥಿಗಳಿಗೆ ಪರೀಕ್ಷೆಯ ನಂತರ ಮರೆತು ಹೋಗುವುವು. ಆದರೆ ಶಿಕ್ಷಕರ ವ್ಯಕ್ತಿತ್ವ ಅವರ ಮನಸ್ಸಿನಲ್ಲಿ ನಿಂತಿರುವುದು. ಬೋಧನೆಯ ಯಾವ ಅಂಶ ಅವರ ವ್ಯಕ್ತಿತ್ವದ ವಿಕಾಸಕ್ಕೆ ನೆರವಾಗುವುದೊ ಅದನ್ನು ವಿದ್ಯಾರ್ಥಿಗಳು ಎಂದಿಗೂ ಮರೆಯುವುದಿಲ್ಲ.

## ವಿದ್ಯಾರ್ಥಿಗಳ ಹಿತಚಿಂತನೆ

ಶಿಕ್ಷಕರು, ಕಛೇರಿ ಅಥವಾ ಬ್ಯಾಂಕಿನ ಗುಮಾಸ್ತರಂತೆ ಹೊತ್ತಿಗೆ ಸರಿಯಾಗಿ ಯಾಂತ್ರಿಕವಾಗಿ ಬಂದು ಹೋಗುವುದು ಮತ್ತು ಸಂತೆಯ ಹೊತ್ತಿಗೆ ಮೂರು ಮೊಳ ಎನ್ನುವಂತೆ ಪಾಠಕ್ಕೆ ಸಿದ್ಧತೆ ಮಾಡಿಕೊಂಡರೆ ಸಾಲದು. ಉಪಾಧ್ಯಾಯರ ಅಪಕ್ವತೆ ವಿದ್ಯಾರ್ಥಿಗಳಿಗೆ ಥಟ್ಟನೆ ತಿಳಿಯುವುದು. ಕೇವಲ ಹೊಟ್ಟೆಯ ಪಾಡಿಗಾಗಿ ಯಾರೂ ಅಧ್ಯಾಪಕರಾಗಬಾರದು ಎಂದು ನಮ್ಮ ಹಿರಿಯ ಪ್ರಾಧ್ಯಾಪಕರೊಬ್ಬರು ಹೇಳುತ್ತಿದ್ದರು. ಆಗ ಶಿಕ್ಷಕರು ಜ್ಞಾನವಾಹಕರಾಗುವುದಿಲ್ಲ. ಜ್ಞಾನಾರ್ಜನೆ, ದಿನದ ಇಪ್ಪತ್ತು ನಾಲ್ಕು ಗಂಟೆಗಳ ಕೆಲಸ. ಶಿಕ್ಷಕರ ಕೆಲಸ ಶಾಲೆಯ ಕೆಲಸದ ಸಮಯಕ್ಕೆ ಸೀಮಿತವಾಗಿರದೆ ನಂತರವೂ ನಡೆಯುವುದು. ಅವರು ವಿದ್ಯಾರ್ಥಿಗಳ ಹಿತಚಿಂತನೆಯಿಂದ ಕೆಲಸ ಮಾಡಬೇಕಾಗುವುದು. ವಿದ್ಯಾರ್ಥಿಗಳ ಹಿತವೆ ಅವರ ಕಾರ್ಯಗಳಿಗೆ ಪ್ರೇರಕ ಶಕ್ತಿ. ತರಗತಿ ಎಂದರೆ ನಾಲ್ಕುಗೋಡೆಗಳಿರುವ ಕೊಠಡಿ, ಆದರೆ ಅದು ಭವಿಷ್ಯವನ್ನು ಒಳಗೊಂಡಿರುವುದು!– ಎಂಬ ಹೇಳಿಕೆಯೊಂದಿರುವುದು. ಕಳ್ಳರು, ಮೋಸಗಾರರು, ವಂಚಕರು ಮುಂತಾದವರಿಂದ ದೇಶಕ್ಕೆ ಆಗುವ ಅನ್ಯಾಯ ಸ್ಥೂಲವಾದುದು. ಆ ನಷ್ಟದ ಬಹುಭಾಗವನ್ನು ತುಂಬಿಸಬಹುದು. ಬೋಧಿಸಲು ಬಾರದ ಶ್ರದ್ಧಾಹೀನ ಉಪಾಧ್ಯಾಯರುಗಳಿಂದ ಆಗುವ ಹಾನಿ ಅಪಾರ, ಬೆಲೆ ಕಟ್ಟಲಾಗದುದು. ಅದರಿಂದ ದೇಶದ ಪ್ರಗತಿಯೇ ಹಿಂದೆ ಬೀಳುವುದು. ಅಶ್ರದ್ಧೆಯಿಂದ ಕೊಡಬಾರದು ಎಂದು ತೈತ್ತಿರೀಯ ಉಪನಿಷತ್ (ಶೀಕ್ಷಾವಲ್ಲಿ, ೧೧ನೆಯ ಅನುವಾಕ) ಹೇಳುವುದು. ಒಂದು ತರಗತಿಯ ವಿದ್ಯಾರ್ಥಿಗಳಿಗೆ ಸರಿಯಾಗಿ ಕಲಿಸದಿದ್ದರೆ ಒಂದು ಪೀಳಿಗೆಯನ್ನೇ ಹಾಳು ಮಾಡಿದಂತೆ ಎಂದು ಶಿಕ್ಷಣತಜ್ಞರು ಹೇಳುವರು.

## ಶಿಕ್ಷಣ ಸಂಸ್ಥೆಗಳು

ಇಂದು ನಮ್ಮ ದೇಶದಲ್ಲಿ ವಿದ್ಯೆ ಹರಡುವುದರಲ್ಲಿ ಶಿಕ್ಷಣ ಸಂಸ್ಥೆಗಳಿಗೆ ಮುಖ್ಯವಾದ ಪಾತ್ರ ಮತ್ತು ಜವಾಬ್ದಾರಿ ಇರುವುವು. ಸಂಸ್ಥೆಗಳಿಲ್ಲದೆ ವಿದ್ಯೆಯ ಪ್ರಸಾರ ಆಗುವಂತಿಲ್ಲ. ಸಂಸ್ಥೆ ಖಾಸಗಿಯಾಗಿರಲಿ ಅಥವಾ ಸರಕಾರಕ್ಕೆ ಸೇರಿರಲಿ, ಅದು ಯೋಗ್ಯ, ಸಮರ್ಥ ಅಧ್ಯಾಪಕರನ್ನು ನೇಮಿಸಿಕೊಂಡ ಹೊರತು ಅದರ ಅಸ್ತಿತ್ವ ಸಾರ್ಥಕವಾಗುವುದಿಲ್ಲ. ಶಿಕ್ಷಕರೇ ಸಂಸ್ಥೆಯ ಆತ್ಮ; ಆಡಳಿತ ಮತ್ತು ಬಂಡವಾಳ ಅದರ ಶರೀರ.

ಯಾವ ಬಗೆಯ ಶಿಕ್ಷಣ ಪದ್ಧತಿ ಇರಬೇಕೆಂಬ ನಿರ್ಣಯದ ಹಕ್ಕು ಸರಕಾರಕ್ಕಿರುವುದು. ಅದರ ಶಾಸನವನ್ನು ಎಲ್ಲಾ ಸಂಸ್ಥೆಗಳೂ ಪಾಲಿಸಬೇಕಾಗುವುದು. ಇಂದು ಉನ್ನತ ಶಿಕ್ಷಣದ ತರಗತಿಗಳು ಪ್ರಾಥಮಿಕ ಶಾಲೆಯಂತೆ ವಿದ್ಯಾರ್ಥಿಗಳನ್ನು ಅಪಾರ ಸಂಖ್ಯೆಯಲ್ಲಿ ಒಳಗೊಂಡಿವೆ. ಇದು ಅನಿವಾರ್ಯವಾಗಿರಬಹುದು. ಆದರೆ ಉನ್ನತ ಶಿಕ್ಷಣದ ಪಾಠಗಳನ್ನು ಅವರು ಕಲಿಯಬೇಕಾದರೆ, ಅವರಿಗೆ ಬೋಧಿಸಬೇಕಾದರೆ ವಿದ್ಯಾರ್ಥಿಗಳಿಗೆ ಒಂದು ಮಟ್ಟದ ಯೋಗ್ಯತೆ ಇರಬೇಕಾಗುವುದು. ಮುಂದುವರಿದ ದೇಶಗಳಲ್ಲಿ ಉನ್ನತ ವ್ಯಾಸಂಗವನ್ನು ಹೆಚ್ಚಿನ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಸೀಮಿತಗೊಳಿಸುವುದರ ಜತೆಗೆ ಶುಲ್ಕವನ್ನು ಏರಿಸಿರುವರು. ಭಾರತಕ್ಕಿಂತ ಹಿಂದುಳಿದ ಇಥಿಯೋಪಿಯಾದಂತಹ ದೇಶದಲ್ಲಿಯೂ ಸಹ ಉನ್ನತ ವ್ಯಾಸಂಗ ವಿದ್ಯಾರ್ಥಿಗಳ ಯೋಗ್ಯತೆಯನ್ನಾಧರಿಸಿರುವುದು ಎಂದು ಅಧಿಕೃತವಾಗಿ ನಮಗೆ ತಿಳಿದು ಬಂದಿರುವುದು. ಸಹಾಯಧನ ಇಲ್ಲದಿದ್ದರೆ ಉನ್ನತ ವ್ಯಾಸಂಗ ಅಲ್ಲಿ ಸಾಧ್ಯವಿಲ್ಲವಂತೆ. ಉನ್ನತ ವ್ಯಾಸಂಗಕ್ಕೆ ಪ್ರವೇಶ ಯೋಗ್ಯತೆಯನ್ನಾಧರಿಸದಿದ್ದರೆ ಅದರ ಗುಣಮಟ್ಟ ಇಳಿದು ಹೋಗಿ ಅಪ್ರಯೋಜಕವಾಗುವುದು. ಅತ್ಯುತ್ತಮ ಶಿಕ್ಷಣ ಪದ್ಧತಿ ಕೆಳಮಟ್ಟದ ವಿದ್ಯಾರ್ಥಿಗೆ ನೆರವಾಗಲಾರದು, ಅತಿಹೀನ ಶಿಕ್ಷಣ ಪದ್ಧತಿ ಉತ್ತಮ ವಿದ್ಯಾರ್ಥಿಯನ್ನು ಹಾಳು ಮಾಡಲಾರದು. ಯಾವುದೇ ಶಿಕ್ಷಣ ಪದ್ಧತಿ ಸಾಧಾರಣ ವಿದ್ಯಾರ್ಥಿಯ ದೃಷ್ಟಿಯಿಂದ ಸೃಷ್ಟಿಯಾಗಿರುವುದು.

## ತಂದೆತಾಯಿಗಳು ಮತ್ತು ಪೋಷಕರು

ಶಿಕ್ಷಕರು, ಶಿಕ್ಷಣ ಪದ್ಧತಿ ಮತ್ತು ಪೋಷಕರೆಂಬ ಮೂರು

ಶೃಂಗಗಳುಳ್ಳ ತ್ರಿಭುಜವು ವಿದ್ಯಾಭ್ಯಾಸ ಮತ್ತು ವಿದ್ಯಾರ್ಥಿಗಳನ್ನೊಳಗೊಂಡಿರುವುದು. ಎಲ್ಲಾ ಭಾರವನ್ನೂ ಶಿಕ್ಷಕರು ಮತ್ತು ಶಾಲೆಗಳ ಮೇಲೆ ಹಾಕಿ ಪೋಷಕರು ಹಾಯಾಗಿರುವಂತಿಲ್ಲ. ಶುಲ್ಕದ ಭಾರ ಮತ್ತು ಮಕ್ಕಳ ಪೋಷಣೆಯ ಹೊರೆ ಇವುಗಳ ಜತೆಗೆ ಅವರು ಕೆಲವು ನೈತಿಕ ಜವಾಬ್ದಾರಿಗಳನ್ನೂ ಭರಿಸಬೇಕಾಗಿರುವುದು ಅನಿವಾರ್ಯ. ವಿದ್ಯಾರ್ಥಿಗಳು ಒಂದು ದಿನದಲ್ಲಿ ಹೆಚ್ಚೆಂದರೆ ಎಂಟು ಗಂಟೆಗಳ ಕಾಲವನ್ನು ಶಾಲೆಯಲ್ಲಿ ಕಳೆಯುವರು. ಉಳಿದ ಮೂರನೆ ಎರಡು ಭಾಗವನ್ನು ತಂದೆ-ತಾಯಿಗಳೊಂದಿಗೆ ಮನೆಯಲ್ಲಿ ಕಳೆಯುವರು. ವಯಸ್ಸು ಹೆಚ್ಚಿದಂತೆ ಅವರು ಗೆಳೆಯರೊಂದಿಗೆ ಕಳೆಯುವ ಸಮಯವೂ ಹೆಚ್ಚುವುದು. ಮಕ್ಕಳ ಮೇಲೆ ಅತ್ಯಂತ ಹೆಚ್ಚು ಪರಿಣಾಮ ಆಗುವುದು ತಂದೆ-ತಾಯಿಗಳ ವ್ಯಕ್ತಿತ್ವದಿಂದ. ನಂತರ ಬರುವುದು, ಶಿಕ್ಷಕರ ವ್ಯಕ್ತಿತ್ವ ಮತ್ತು ಗೆಳೆಯರ ಪ್ರಭಾವ. ಅಧ್ಯಾಪಕರಿಗೆ ವಿದ್ಯಾರ್ಥಿಗಳ ಒಂದು ಮುಖದ ಪರಿಚಯ ಮಾತ್ರ ಇರುವುದು. ಹಲವು ವೇಳೆ ಅವರು ವಿದ್ಯಾರ್ಥಿಗಳ ನಿಜವಾದ ಧ್ವನಿಯನ್ನೂ ಕೇಳಿರುವುದಿಲ್ಲ. ಮಕ್ಕಳಿಗೆ ಬೇಕಾದ ಅನುಕೂಲಗಳನ್ನು ಒದಗಿಸುವುದರೊಂದಿಗೆ ತಂದೆತಾಯಿಗಳ ಜವಾಬ್ದಾರಿ ಮುಗಿಯುವುದಿಲ್ಲ. ಮಕ್ಕಳ ಮಾನಸಿಕ ಸ್ಥಿತಿ ಬಹುಮಟ್ಟಿಗೆ ಮನೆಯ ವಾತಾವರಣವನ್ನು ಅವಲಂಬಿಸಿರುವುದು. ನೂರಕ್ಕೆ ತೊಂಬತ್ತು ಭಾಗಕ್ಕಿಂತಲೂ ಹೆಚ್ಚಾಗಿ ಮಕ್ಕಳು ತಂದೆತಾಯಿಗಳಂತಾಗುವರು. ತಂದೆತಾಯಿಗಳ ಅನುಕರಣೆಯಿಂದ ಮಕ್ಕಳ ವಿದ್ಯಾಭ್ಯಾಸ ಪ್ರಾರಂಭವಾಗುವುದು. "ಮಕ್ಕಳಿಸ್ಕೂಲ್ ಮನೇಲಲ್ವೇ?" ಎಂದು ಸಾಮಾಜಿಕ ನಾಟಕ ಸಾಹಿತ್ಯದ ಅಧ್ವರ್ಯು ಟಿ.ಪಿ. ಕೈಲಾಸಂ ನೆನಪು ಮಾಡಿರುವರು. ನಾವು ಹೇಳಿದಂತೆ ಮಾಡಿ, ನಾವು ಮಾಡಿದಂತೆ ಮಾಡಬೇಡಿ ಎಂದು ತಂದೆತಾಯಿಗಳು ಹೇಳುವಂತೆಯೂ ಇಲ್ಲ. ನಮ್ಮ ಮಕ್ಕಳು ನಮ್ಮಂತೆ ಅಲ್ಲ ಎಂದು ಮೂಗೆಳೆಯಬೇಡಿ, ಈಗಾಗಲೇ ಅವರು ನೂರಕ್ಕೆ ತೊಂಬತ್ತು ಭಾಗ ನಿಮ್ಮಂತಿರುವರು; ಉಳಿದ ಒಂದು ಭಾಗವೂ ಅವರು ನಿಮ್ಮಂತೆಯೇ ಆಗಬೇಕೆಂದು ಬಯಸುವಿರಾ ಎಂದು ಬುದ್ಧಿವಂತರೊಬ್ಬರು ಹಾಸ್ಯವಾಗಿ ವಾಸ್ತವಿಕತೆಯನ್ನು ತೋರಲು ಪ್ರಶ್ನಿಸಿರುವರು. ನಮ್ಮೆಲ್ಲರ ಕಲಿಕೆ ಪ್ರಾರಂಭವಾಗಿರುವುದೇ ಅನುಕರಣೆಯಿಂದ. ತಂದೆತಾಯಿಗಳು ಯಾವ ಆದರ್ಶವನ್ನು ಪಾಲಿಸುವರೊ ಅದನ್ನು ಮಕ್ಕಳೂ ಸ್ವೀಕರಿಸುವುದು ಸಾಮಾನ್ಯವಾಗಿ ಕಂಡು ಬರುವುದು.

## ಪುನರ್‌ಪರಿಶೀಲನೆ

ನಮ್ಮ ದೇಶಕ್ಕೆ ರಾಜಕೀಯ ಸ್ವಾತಂತ್ರ್ಯ ಬಂದು ಅರ್ಧ ಶತಮಾನ ಆಗಿರುವುದು. ಆದರೂ ನಮ್ಮ ಶಿಕ್ಷಣ ಪದ್ಧತಿ ಬಹುತೇಕ ಬ್ರಿಟಿಷರು ಬಿಟ್ಟು ಹೋದಂತೆಯೆ ಇರುವುದು. ಅಲ್ಲಿ ಇಲ್ಲಿ ಹೊಸ ಪದ್ಧತಿಗಳನ್ನು ಪ್ರಾಥಮಿಕ ಶಿಕ್ಷಣದಲ್ಲಿ ಪ್ರಯೋಗ ಮಾಡಿರುವರು. ಜನಸಂಖ್ಯೆಯ ಶೇಕಡ ೩೫ರಷ್ಟು ಮಾತ್ರ ಅಕ್ಷರಸ್ಥರಿದ್ದು ಪ್ರಜಾಪ್ರಭುತ್ವದಿಂದ ಆಳುತ್ತಿರುವ ಅತ್ಯಂತ ಜನಸಂಖ್ಯೆಯುಳ್ಳ ದೇಶ ಭಾರತವೊಂದೇ ಎಂದು ಕಾಣುವುದು. ಬ್ರಿಟಿಷರ ಆಡಳಿತದಿಂದ ಸ್ವಾತಂತ್ರ್ಯವನ್ನು ಪಡೆದ ಭಾರತದ ಮೇಲೆ ಸಮಸ್ಯೆಗಳೆಂಬ ಸೈನಿಕರು ಮುತ್ತಿಗೆ ಹಾಕುತ್ತಿರುವರು. ಅವುಗಳಲ್ಲಿ ಮುಖ್ಯವಾದುವು ಮತ್ತು ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳಿಗೂ ತೊಡಕಾಗಿ ನಿಂತಿರುವುವು ಎರಡು : ಅತಿ ಜನಸಂಖ್ಯೆ ಮತ್ತು ಅನಕ್ಷರತೆ. ನಮ್ಮ ದೇಶದ ಸಮಸ್ಯೆಗಳನ್ನು ಆಮೂಲಾಗ್ರವಾಗಿ ವಿಶ್ಲೇಷಿಸಿ, ಭರತಖಂಡದ ಪುನರುತ್ಥಾನದ ಪಾಂಚಜನ್ಯವನ್ನು ಮೊಳಗಿಸಿದ ದೇಶಭಕ್ತ ಸ್ವಾಮಿ ವಿವೇಕಾನಂದರು, ನಮ್ಮ ಎಲ್ಲಾ ಸಮಸ್ಯೆಗಳಿಗೂ ವಿದ್ಯಾಭ್ಯಾಸವೊಂದೇ ಪರಿಹಾರ ಎಂದು ಹೇಳಿರುವರು. ಇಂದು ಎಲ್ಲ ಹಳ್ಳಿಗಳಿಗೂ ಶಾಲೆ, ಆಸ್ಪತ್ರೆ, ನೀರು, ವಿದ್ಯುತ್‌ಶಕ್ತಿ ಇಲ್ಲದಿದ್ದರೂ ರಾಜಕೀಯ ಸಂಪೂರ್ಣವಾಗಿ ಹರಡಿದೆ. ರೋಗ ಪ್ರಬಲವಾಗಿದ್ದಷ್ಟೂ ಚಿಕಿತ್ಸಾ ವಿಧಾನವೂ ಬಲವಾಗಬೇಕು. ವಿದ್ಯಾಭ್ಯಾಸದ ಆವಶ್ಯಕತೆಯನ್ನು ಇಂದು ಎಲ್ಲರೂ ಮನಗಾಣುತ್ತಿರುವರು. ಅದನ್ನು ಪಡೆಯಲು ಕಷ್ಟಪಟ್ಟು ಮುಂದೆ ಬರುತ್ತಿರುವರು. ಶ್ರೀಸಾಮಾನ್ಯರ ಜೀವನ ಸಹನೀಯವಾಗಬೇಕಾದರೆ, ದೇಶ ಮುಂದೆ ಬರಬೇಕಾದರೆ, ವಿದ್ಯಾಭ್ಯಾಸದಿಂದ ನಮ್ಮ ಸಮಸ್ಯೆಗಳನ್ನು ನಾವೇ ಬಗೆಹರಿಸಿಕೊಳ್ಳಬೇಕು. ಅಷ್ಟರಮಟ್ಟಿಗೆ ವಿದ್ಯಾಭ್ಯಾಸ ನಮ್ಮ ಸಮಾಜದ ಆಳಕ್ಕೆ ಪ್ರವೇಶಿಸಬೇಕು. ಯಾವ ಸಮಾಜದಲ್ಲಿ ಉನ್ನತ ಸತ್ಯಗಳು ಅನುಷ್ಠಾನಕ್ಕೆ ಬರುವುವೊ ಆ ಸಮಾಜ ಶ್ರೇಷ್ಠವಾದುದು ಎಂದು ಸ್ವಾಮಿ ವಿವೇಕಾನಂದರು ಹೇಳುವರು. (ಸ್ವಾ. ವಿ. ಕೃತಿಶ್ರೇಣಿ. ಸಂ. ೨, ಪು. ೨೭)

## ವಿದ್ಯಾರ್ಥಿ ನದಿ

ವಿದ್ಯಾಭ್ಯಾಸದಿಂದ ನಮ್ಮ ಜೀವನ ಉದ್ಧಾರವಾಗಬೇಕಾದರೆ, ಶಿಕ್ಷಕರು, ಪೋಷಕರು, ಮತ್ತು ಶಿಕ್ಷಣ ಸಂಸ್ಥೆಗಳು ರಾಷ್ಟ್ರದ ಹಿತದೃಷ್ಟಿಯಿಂದ ಕೆಲಸ ಮಾಡಬೇಕು. ನಮ್ಮ ವಿದ್ಯಾಭ್ಯಾಸ ಪದ್ಧತಿಯನ್ನು ಪರರ ದೃಷ್ಟಿಯಿಂದ ನೋಡುತ್ತಿರುವೆವು. ಸ್ವತಂತ್ರ ದೇಶದಲ್ಲಿರುವ ನಾವು ಈಗ ನಮ್ಮ ದೃಷ್ಟಿಯಿಂದ ವಿದ್ಯಾಭ್ಯಾಸ ಪದ್ಧತಿಯನ್ನು ರೂಪಿಸಿಕೊಳ್ಳಬೇಕಾಗಿದೆ. ತಂದೆತಾಯಿಗಳು ಮಕ್ಕಳ ನಡೆ-ನುಡಿ ಮತ್ತು ಚಾರಿತ್ರ್ಯಕ್ಕೆ ಗಮನ ಕೊಡಬೇಕು. ವಿದ್ಯಾರ್ಥಿಗಳು ವಿದ್ಯಾಕಾಂಕ್ಷಿಗಳಾಗಬೇಕು. ಶಿಕ್ಷಕರು ತಮ್ಮ ಕೆಲಸವನ್ನು ಪ್ರಾಮಾಣಿಕತೆಯಿಂದ, ನಿಷ್ಠೆಯಿಂದ ಮಾಡಬೇಕು. ಅದೇ ಅವರು ಸಮಾಜಕ್ಕೆ ಮಾಡುವ ಸೇವೆ. ತಂದೆತಾಯಿಗಳು ಮತ್ತು ಶಿಕ್ಷಕರು ಎರಡು ದಡಗಳು. ವಿದ್ಯಾರ್ಥಿಗಳೆಂಬ ನದಿ ಇವೆರಡರ ಮಧ್ಯೆ ಹರಿಯಬೇಕು. ದಡಗಳಿಂದಲೇ ನದಿಗೆ ಒಂದು ಪಾತ್ರ ಇರುವುದು. ಒಂದು ದಡ ದುರ್ಬಲವಾದರೂ ನೀರು ಸ್ವೇಚ್ಛೆಯಿಂದ ಹರಿದು ಹಾಳಾಗುವುದು.

ಸುಮಾರು ೪೫ ವರ್ಷಗಳ ಹಿಂದೆ ರಾಷ್ಟ್ರಕವಿ ಕುವೆಂಪು ಅವರು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿದ್ದಾಗ ಮೈಸೂರಿನಲ್ಲಿ ವಿಶ್ವವಿದ್ಯಾನಿಲಯದ ಯುವಜನೋತ್ಸವ ನಡೆಯಿತು. ವ್ಯವಸ್ಥೆಯಲ್ಲಿ ಕಂಡ ಒಂದು

ಮೋಷದಿಂದ ವಿದ್ಯಾರ್ಥಿಗಳು ದಂಗೆಯೆದ್ದರು. ಪೋಲಿಸ್‌ನವರು ಗೋಲಿಬಾರ್ ಮಾಡಿದಾಗ ಒಬ್ಬ ವಿದ್ಯಾರ್ಥಿಯೂ ಸಾವಿಗೀಡಾಗಿ ನಗರದಲ್ಲಿ ಕರ್ಫ್ಯೂ ಜಾರಿಗೆ ಬಂದಿತು. ವಿದ್ಯಾರ್ಥಿಗಳ ನಡವಳಿಕೆಯಿಂದ ಮನನೊಂದ ಸಹಜ ಕವಿಗಳಾದ ಕುವೆಂಪು ಅವರು ತಮ್ಮ ಆಗ್ರಹವನ್ನು ಕವಿತೆಯಿಂದಲೇ ವ್ಯಕ್ತ ಪಡಿಸಿದರು. ಅದು ಮಾರನೆಯ ದಿನ ವೃತ್ತ ಪತ್ರಿಕೆಗಳಲ್ಲಿ ಪ್ರಕಟವಾಯಿತು:

**ಯಾರೆಂದು ಊಹಿಸಿ!**

ಅಂದೊ?
ಹಿಂದಕ್ಕೆ ಗುರುವಿದ್ದ, ಮುಂದಕ್ಕೆ ಗುರಿಯಿತ್ತು;
ಸುಗ್ಗಿದುದು ಮುಂದೆ ಧೀರ ದಂಡು.
ಇಂದೋ?
ಹಿಂದಕ್ಕೆ ಗುರುವಿಲ್ಲ, ಮುಂದಕ್ಕೆ ಗುರಿಯಿಲ್ಲ;
ಮುಗ್ಗುತಿದೆ ಮಧ್ಯೆ ಹೇಡಿಹಿಂಡು!

ಉಪನಿಷತ್ತುಗಳ ಭಾಷೆಯಲ್ಲಿ ಧೀರರು ಎಂದರೆ ಸತ್ಯದ ಸಾಕ್ಷಾತ್ಕಾರಕ್ಕಾಗಿ ಯಾವ ಕಂಟಕಗಳಿಗೂ ಹೆದರದೆ ಮೃತ್ಯುವಿಗೂ ಎದೆಯೊಡ್ಡಿ ಸತ್ಯ ಎಲ್ಲಿಗೆ ಅವರನ್ನು ಕರೆದೊಯ್ದರೆ ಅಲ್ಲಿಗೆ ಹೋಗಲು ಸಿದ್ಧರಿದ್ದ ಎದೆಗಾರರು. ಅವರು ಗುರುಗಳ ಮಾರ್ಗದರ್ಶನದಲ್ಲಿ ಸಾಧನೆ ಮಾಡಿ ಮಾನವರನ್ನು ಉದ್ಧರಿಸುವ ಜ್ಞಾನಾಮೃತವನ್ನು ಕೊಟ್ಟುಹೋದರು. ಇಂದು ಅನೇಕ ಸೌಕರ್ಯಗಳಿದ್ದರೂ ವಿದ್ಯಾರ್ಥಿಗಳು ಖಿನ್ನತೆ (depression) ಎಂಬ ಕಾಯಿಲೆಯಿಂದ ನರಳುತ್ತಿರುವರು. ಇದಕ್ಕೆ ಕಾರಣಗಳು ಎರಡು: ಒಂದು, ಪ್ರಪಂಚವನ್ನು ಅನುಭವಿಸಲು ದ್ರವ್ಯಾರ್ಜನೆಯ ಅತೀವದಾಹ; ಎರಡನೆಯದು, ಅವರಿಗೆ ಮಾರ್ಗದರ್ಶನವಿಲ್ಲ. ಗುರುಗಳ, ತಂದೆತಾಯಿಗಳ ಆವಶ್ಯಕತೆಯನ್ನು ಮೀರಿದ್ದೇವೆ ಎಂಬ ಭಾವನೆ ಅವರಿಗಿರುವುದು. ಹಲವರ ದುಡಿಮೆ ಮತ್ತು ಶಾಲಾವಿದ್ಯಾಭ್ಯಾಸದಿಂದ ವಂಚಿತರಾದ ಅನೇಕ ಕಾರ್ಮಿಕರ ದುಡಿತದಿಂದ ಬರುವ ತೆರಿಗೆಹಣವನ್ನು ಸರಕಾರ ವಿದ್ಯಾಸಂಸ್ಥೆಗಳ ಮೇಲೆ ಖರ್ಚುಮಾಡುತ್ತಿದೆ. ಈ ಹಣದಿಂದ ವಿದ್ಯಾಭ್ಯಾಸವನ್ನು ಪಡೆದ ನಾವು—ವಿದ್ಯಾರ್ಥಿಗಳು ಮತ್ತು ಶಿಕ್ಷಕರು—ನಮಗಾಗಿ ತ್ಯಾಗ ಮಾಡಿದ ತಂದೆತಾಯಿಗಳಿಗೂ, ಪರೋಕ್ಷವಾಗಿ ತಮ್ಮ ದುಡಿಮೆಯ ಫಲದ ಭಾಗವನ್ನು ನೀಡಿದ ಸಮಾಜದ ಇತರ ವರ್ಗಗಳಿಗೂ ವಿದ್ಯಾಭ್ಯಾಸದ ಫಲವನ್ನು ಹಿಂತಿರುಗಿ ನೀಡುವ ಮೂಲಕ ನಮ್ಮ ಋಣವನ್ನು ತೀರಿಸಬೇಕು.

◆

## ಔದಾರ್ಯ

ಅಮೆರಿಕದ ಅಂತಯುದ್ಧದ ಸಂದರ್ಭದಲ್ಲಿ ಪ್ರೆಸಿಡೆಂಟ್ ಜೆಫರ್‌ಸನ್ ಡೇವಿಡ್ ಒಬ್ಬ ಪ್ರಾಮಾಣಿಕ ದಕ್ಷ ಆಡಳಿತಗಾರನಿಗಾಗಿ ಹುಡುಕುತ್ತಿದ್ದರು. ಅವರು ಜನರಲ್ ಲೀ ಅವರನ್ನು ಕರೆದು ಇದರ ಸಂಬಂಧವಾಗಿ ವಿಚಾರಿಸಿದರು. ವ್ಹಿಟಿಂಗ್ (Whiting) ಎಂಬುವರ ಹೆಸರನ್ನು ಪ್ರಸ್ತಾಪಿಸಿ "ಆ ಸ್ಥಾನಕ್ಕೆ ಅವರು ಯೋಗ್ಯರೇ?" ಎಂದು ಲೀ ಅವರನ್ನು ಕೇಳಿದರು. ಲೀ ಅವರು ವ್ಹಿಟಿಂಗ್‌ರನ್ನು ಬಹಳವಾಗಿ ಪ್ರಶಂಸಿಸಿ ಆ ಸ್ಥಾನಕ್ಕೆ ಶಿಫಾರಸು ಮಾಡಿದರು.

ಲೀ ಅವರ ಕೈಕೆಳಗೆ ಕೆಲಸ ಮಾಡುತ್ತಿದ್ದ ಅಧಿಕಾರಿಗೆ ಇದನ್ನು ಕೇಳಿ ಆಶ್ಚರ್ಯವಾಯಿತು. ಲೀ ಅವರನ್ನು ಆ ಕಡೆ ಕರೆದು, "ವ್ಹಿಟಿಂಗ್ ತಮ್ಮನ್ನು ನಿಂದಿಸುತ್ತಿರುವ ಬಗ್ಗೆ ತಮಗೆ ಗೊತ್ತೆ?" ಎಂದು ಕೇಳಿದರು. ಲೀ ಉತ್ತರಿಸಿದರು: "ಗೊತ್ತು. ಪ್ರೆಸಿಡೆಂಟರು ವ್ಹಿಟಿಂಗ್‌ರ ಬಗ್ಗೆ ನನ್ನ ಅಭಿಪ್ರಾಯವನ್ನು ಕೇಳಿದರೇ ಹೊರತು, ನನ್ನ ಬಗ್ಗೆ ವ್ಹಿಟಿಂಗ್‌ರ ಅಭಿಪ್ರಾಯವನ್ನು ಕೇಳಲಿಲ್ಲ."

ಉದಾತ್ತ ಮನೋಭಾವದವರು ನಿಂದೆಯನ್ನೂ ಉದಾರವಾಗಿ ಸ್ವೀಕರಿಸುತ್ತಾರೆ.

## ಆಶ್ರಮದ ಕಾರ್ಯಕ್ರಮಗಳು

### ಮಾರ್ಚ್ 2004

| | | |
|---|---|---|
| ಏಕಾದಶಿ | 2 | ಮಂಗಳವಾರ |
| ಶ್ರೀಚೈತನ್ಯ ಜಯಂತಿ | 6 | ಶನಿವಾರ |
| ಸ್ವಾಮಿ ಯೋಗಾನಂದ ಜಯಂತಿ | 10 | ಬುಧವಾರ |
| ಏಕಾದಶಿ | 17 | ಬುಧವಾರ |
| ಶ್ರೀರಾಮನವಮಿ | 30 | ಮಂಗಳವಾರ |
| ಏಕಾದಶಿ | 31 | ಬುಧವಾರ |

ಪ್ರತಿ ಶನಿವಾರ ಇಂಗ್ಲೀಷಿನಲ್ಲೂ ಮತ್ತು ಪ್ರತಿ ಗುರುವಾರ ಮತ್ತು ಭಾನುವಾರಗಳಂದು ಕನ್ನಡದಲ್ಲೂ ಸಂಜೆ ೬ ರಿಂದ ೭ ಗಂಟೆಯವರಿಗೆ ಆಶ್ರಮದ ಸಭಾಂಗಣದಲ್ಲಿ ಆಧ್ಯಾತ್ಮಿಕ ಪ್ರವಚನಗಳು ನಡೆಯುತ್ತವೆ. ವಿವರಗಳಿಗೆ ಮೈಸೂರು ಶ್ರೀರಾಮಕೃಷ್ಣ ಆಶ್ರಮವನ್ನು ಸಂಪರ್ಕಿಸಿ.